**ಓ.ಎಸ್ ನಂ. 93 /2020** **ಪಿ.ಡಬ್ಲ್ಯೂ-1**

**ಸಾಕ್ಷಿಯನ್ನು ದಿನಾಂಕಃ 25.09.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 7 ಮತ್ತು 8 ರವರ ಪರ ವಕೀಲರಾದ ಶ್ರೀ ಜಿ ಎನ್ ಎನ್ ವಕೀಲರಿಂದಃ**

ನನಗೆ ಮಾಡಿಕೊಟ್ಟಿರುವ ಕರಾರು ಪತ್ರ ನೊಂದಾಯಿತ ಕರಾರು ಪತ್ರ ಆಗಿರುತ್ತದೆ ಎಂದರೆ ಸರಿ. ನನಗೆ ಮಾಡಿಕೊಟ್ಟ ಕರಾರು ಪತ್ರದ ಆಸ್ತಿಯು ಪ್ರತಿವಾದಿಗಳು ಪಿತ್ರಾರ್ಜಿತ ಆಸ್ತಿಯಾಗಿರುತ್ತದಕೆ ಎಂದರೆ ಸರಿ. ಸದರಿ ಕರಾರು ಪತ್ರದಲ್ಲಿ 3 ನೇ ಪ್ರತಿವಾದಿ ಜ್ಯೋತಿ ರವರ ಮದುವೆಯ ಖರ್ಚಿಗಾಗಿ ಮತ್ತು ಮೃತ ಸಿದ್ದೇಗೌಡ ಮತ್ತು ಮಾಕಮ್ಮ ರವರ ಕುಟುಂಬದ ನಿರ್ವಹಣೆ ಮತ್ತು ಕೈ ಸಾಲ ತೀರಿಸುವ ಸಲುವಾಗಿ ಕರಾರು ಪತ್ರ ಮಾಡಿಕೊಡಲಾಗಿತ್ತು ಎಂದು ಬರೆಯಲಾಗಿರುತ್ತದೆ ಎಂದರೆ ಸರಿ. ಕರಾರು ಪತ್ರದ ಮುಂಗಡ ಹಣದಲ್ಲಿ ಮೃತ ಸ್ವಾಮಿ ಉ. ಗವಿ ರವರಾಗಲೀ ಅವರ ಹೆಂಡತ ಪ್ರತಿವಾದಿ 6 ರವರಾಗಲೀ ಅಥವಾ ಅವರ ಮಕ್ಕಳುಗಳಾದ ಪ್ರತಿವಾದಿ 7 ಮತ್ತು 8 ರವರಾಗಲೀ ಯಾವುದೇ ಮುಂಗಡ ಹಣ ಪಡೆದಿರುಕಿವುದಿಲ್ಲ ಎಂದರೆ ಸಾಕ್ಷಿಯು ಸದರಿ ಸ್ವಾಮಿ ಮತ್ತು ಅವರ ತಂದೆ ಸಿದ್ದೇಗೌಡರು ಜೊತೆಯಾಗಿ ಬಂದು ಕ್ರಯದ ಮುಂಗಡ ಹಣವನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ನಾನು ಹೇಳುವಂತೆ ಸ್ವಾವಿಯವರಿಗೆ ಕರಾರಿನ ಮುಂಗಡ ಹಣವನ್ನು ಪಾವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 7 ಮತ್ತು 8 ರವರ ಪರವಾಗಿ ನ್ಯಾಯಾಲಯದಿಂದ ಯಾವುದೇ ಅನುಮತಿಯನ್ನು ಪಡೆದುಕೊಂಡು ಕರಾರು ಪತ್ರ ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಮೈನರ್ ಮಕ್ಕಳಾದ ಪ್ರತಿವಾದಿ 7 ಮತ್ತು 8 ರವರಿಗೆ ಹಕ್ಕು

ಇರುವುದರಿಂದ ಸದರಿ ಕರಾರು ಪತ್ರವು ಅವರಿಗೆ ಬಾಧಕವಾಗುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ